ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ಒಂದು ವರ್ಷದೊಳಗಾಗಿ ಪರಿಗಣಿಸದ್ದರಿಂದ ಆಗಿದ್ದ ಎಂ.ಸಿ.ಆರ್. ನಿಯಮ 24(3)ರಂತೆ ತಿರಸ್ಕೃತಗೊಂಡಿತು. ಆಗಿದ್ದ ಎಂ.ಸಿ.ಆರ್. 1960ರ ನಿಯಮ 24(3)ರ ಪ್ರಕಾರ ಸಲ್ಲಿಸಿದ್ದ ಯಾವುದೇ ಅರ್ಜಿಯನ್ನು 12 ತಿಂಗಳ ಒಳಗಾಗಿ ವಿಲೇ ಮಾಡದಿದ್ದಲ್ಲಿ ಸದರಿ ಅರ್ಜಿಯು ಡೀಮ್ಡ್ ರಿಜೆಕ್ಷನ್ (deemed rejected) ಆಗುತ್ತಿತ್ತು. ಈ ನಿಯಮವನ್ನು ದಿನಾಂದ 19–10–89 ರಂದು ಕೈಬಿಡಲಾಗಿದೆ. ನಂತರ ಸದರಿ ಸಂಸ್ಥೆಯು ಭಾರತ ಸರ್ಕಾರಕ್ಕೆ ಪರಿಷ್ಕರಣ ಅರ್ಜಿಯನ್ನು ಸಲ್ಲಿಸಿತ್ತು. ಭಾರತ ಸರ್ಕಾರವು ಮೆ:ಪಿ.ಐ.ಎಸ್.ಎಲ್. ಸಂಸ್ಥೆಯು ಸಲ್ಲಿಸಿದ ಪರಿಷ್ಕರಣ ಅರ್ಜಿಯನ್ನು ಊರ್ಜಿತಗೊಳಿಸಿದೆ. ಸದರಿ ಸಂಸ್ಥೆಯವರೆ ಮನವಿಯ ಅನ್ವಯ ಕಂದಾಯ ವ್ಯಾಪ್ತಿಗೆ ಬರುವ 42.70 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ವಿಮೋಚನಾ ಪತ್ರಗಳನ್ನು ಪಡೆದ ನಂತರ ನಿಯಮಾನುಸಾರ 42.70 ಹೆಕ್ಟೇರ್ ಪ್ರದೇಶಕ್ಕೆ ದಿನಾಂಕ. 01–03–2004ರ ಅದಿಸೂಚನೆ ಸಂಖ್ಯೆ: ಸಿಐ/5 ಎಂಎಂಎಂ. 2002ರಲ್ಲಿ 01–04–1983ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ಗಣಿ ಗುತ್ತಿಗೆಯನ್ನು ನವೀಕರಿಸಲಾಗಿದೆ. ಉಳಿದ ಪ್ರದೇಶವು ಕಾಯ್ದಿರಿಸಿದ ಅರಣ್ಯ ವ್ಯಾಪ್ತಿಗೆ ಬರುವುದರಿಂದ ಪರಿಗಣಿಸಿರುವುದಿಲ್ಲ.

ಮೆ:ವಿ.ಐ.ಎಸ್.ಎಲ್.ಸಂಸ್ಥೆಗೆ 1963ರಲ್ಲಿ ಗಣಿ ಗುತ್ತಿಗೆ ನೀಡಿರುವುದರಿಂದ ಹಾಗೂ ಆ ಸಮಯದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿ ಇಲ್ಲದ್ದರಿಂದ, ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಇ) ಈವರೆವಿಗು ಈ ಪ್ರದೇಶದಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.

968(1491) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ(ಬೆಳ್ಳಾವಿ) : ಮಾನ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಿನಿಸ್ಟ್ರಿ ಆಫ್ ಕಮ್ಯೂನಿಕೇಶನ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ರಚಿಸಿರುವ ಸಹಕಾರ ನಗರ ಬಡಾವಣೆಯಲ್ಲಿ ಉದ್ಯಾನವನ ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ಗಾಗಿ (ಸಿ.ಎ.) ಮೀಸಲಿಟ್ಟ ಸ್ಥಳವನ್ನು ನಿವೇಶನ ರಚಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿರುವುದೆ(ವಿವರ ಒದಗಿಸುವುದು) :

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಉದ್ಯಾನವನ:ಬಯಲು ಜಾಗ 11

ಸಿ.ಎ. 55

ಖುಲ್ಲಾ ಜಾಗ 04

ಒಟ್ಟು ನಿವೇಶನಗಳು 70

ಇ) ಹಾಲಿ ಸ್ಥಳದಲ್ಲಿ ನಿರ್ಮಿಸಿರುವಂತೆ ಮಾರ್ಪಡಿತ ಬಡಾವಣೆ ನಕ್ಷೆ ಅನುಮೋದಿಸಿಕೊಡುವಂತೆ ಸಂಘದವರು ಕೋರಿದ್ದು, ಉದ್ದೇಶಿತ ಮಾರ್ಪಡಿತ ಬಡಾವಣೆ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿ ಇಲ್ಲದ ಕಾರಣ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ, ಉದ್ದೇಶಿತ ಮಾರ್ಪಾಡಿತ ಬಡಾವಣೆ ನಕ್ಷೆಯನ್ನು ಅನುಮೋದಿಸುರುವುದಿಲ್ಲ.

969(1272) ಶ್ರೀ ಲಾಲಾಜಿ ಆರ್.ಮೆಂಡನ್(ಕಾಪು) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುನಾಮಿ ಅಲೆಗಳ ತೀವ್ರತೆಗೆ ಒಳಗಾದ ಮೀನುಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸುನಾಮಿಯಿಂದ ಮೀನುಗಳು ವಿಷಪೂರಿತವಾಗಿದೆ ಎಂದು ಜನರು ಮೀನು ಖರೀದಿಸದಿರುವುದರಿಂದ ಮೀನು ಮಾರಾಟಗಾರರು ನಷ್ಟ ಅನುಭವಿಸುತ್ತಿರುವುದು ನಿಜವಲ್ಲವೇ:

ಇ) ಹಾಗಿದ್ದಲ್ಲಿ. ಇದರ ಪರಿಹಾರ ಕಾರ್ಯವೇನು ;

ಈ) ಸುನಾಮಿ ಅಲೆಗಳಿಂದ ಕಡಲ ತಡಿಯಲ್ಲಿ ಸಂಭವಿಸಿದ ನಷ್ಟದ ಅಂದಾಜು ಮಾಡಿ ಪರಿಹಾರ ಕಾಮಗಾರಿ ನಡೆಸಲು ಸರ್ಕಾರ ತೆಗೆದುಕೊಂಡ ಕ್ರಮವೇನು:

ಉ) ಸುನಾಮಿ ಪರಿಹಾರ ಕಾರ್ಯ ನಡೆಸಲು ಉಡುಪಿ, ಮಂಗಳೂರು ಮತ್ತು ಕಾರವಾರ ಜಿಲ್ಲೆಗಳಿಗೆ ನಿಗದಿಪಡಿಸಿದ ವಿಶೇಷ ಪ್ಯಾಕೇಜ್ ಹಾಗೂ ನಿಗದಿಪಡಿಸಿದ ಮೊಬಲಗು ಎಷ್ಟು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಸುನಾಮಿ ಅಲೆಗಳ ತೀವ್ರತೆಗೆ ಒಳಗಾದ ಮೀನುಗಾರರ ದೋಣಿಗಳು ಅಪಘಾತಕ್ಕೀಡಾಗಿ ದೋಣಿಗಳಿಗೆ ನಷ್ಟ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸುನಾಮಿಯಿಂದ ಮೀನುಗಳು ವಿಷಪೂರಿತವಾಗಿವೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ತಪ್ಪು ಕಲ್ಪನೆಯಿಂದ ಮತ್ತು ಸುಳ್ಳು ಸುದ್ದಿಯಿಂದ ಜನರು ಮೀನು ಖರೀದಿಸಲು ಹಿಂಜರಿದುದರಿಂದ ಕೆಲವು ದಿನಗಳ ಮಟ್ಟಿಗೆ ಮೀನು ಮಾರಾಟಗಾರರು ನಷ್ಟ ಅನುಭವಿಸಿದ್ದು ನಿಜ.

ಇ) ಈ ಬಗ್ಗೆ ಮೀನುಗಾರಿಕೆ ಇಲಾಖೆಯಿಂದ ಹಾಗೂ ಮೀನುಗಾರಿಕೆ ಕಾಲೇಜು, ಮಂಗಳೂರುರವರ ವತಿಯಿಂದ ದಿನಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಚಾನಲ್‌ಗಳ ಮೂಲಕ ಜನರಿಗೆ ಸುನಾಮಿ ಅಲೆಗಳಿಂದ ಯಾವುದೇ ಮೀನುಗಳು ವಿಷಪೂರಿತವಾಗಿಲ್ಲವೆಂದು ಮತ್ತು ಮೀನನ್ನು ತಿನ್ನಲು ಯಾವುದೇ ತೊಂದರೆ ಇಲ್ಲವೆಂದು ಸ್ಪಷ್ಟೀಕರಣ ನೀಡಿ ಪ್ರಚಾರ ನೀಡಲಾಗಿದೆ. ಈಗ ಸಮಸ್ಯೆ ಪರಿಹರವಾಗಿದೆ ಮತ್ತು ಜನರು ಎಂದಿನಂತೆ ಮೀನು ಖರೀದಿಸುತ್ತಿರುವರು.

ಈ) ಸುನಾಮಿ ಅಲೆಗಳಿಂದ ಕಡಲ ತೀರದಲ್ಲಿ ಸಂಭವಿಸಿದ ನಷ್ಟದ ಅಂದಾಜು ಮಾಡಿ ಪರಿಹಾರವಾಗಿ ಹಾನಿಗೊಳಗಾದ ಬೋಟುಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ